ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್ ಎನ್ ಎಸ್ - 19

3ನೇ ವರ್ಷ 22ನೇ ಸಂಚಿಕೆ ಕೊಪ್ಪ 27-1-1985 ಭಾನುವಾರ ಬೆಲೆ 40 ಪೈಸೆ

ಮಾರ್ಚ್ 5 ರಂದು ವಿಧಾನಸಭೆ ಚುನಾವಣೆ

ಬೆಂಗಳೂರು: ರಾಜ್ಯದ ವಿಧಾನಸಭೆಗೆ ಮಾರ್ಚ್ 5 ರಂದು ಚುನಾವಣೆ ನಡೆಯಲಿದೆ.

ಚುನಾವಣೆಗೆ ನಾಮಪತ್ರಗಳನ್ನು ಸಲ್ಲಿಸಲು ಫೆ. 1 ರಿಂದ 8 ರ ವರೆಗೆ ಅವಧಿ ನೀಡಲಾಗಿದ್ದು ನಾಮಪತ್ರ ಪರಿಶೀಲನೆ ಫೆ. 9 ರಂದು ನಡೆಯುತ್ತದೆ. ಫೆ. 11 ನಾಮಪತ್ರ ಹಿಂತೆಗೆದುಕೊಳ್ಳಲು ಕೊನೆಯ ದಿನವಾಗಿರುತ್ತದೆ.

ಚುನಾವಣೆಗಳು ಘೋಷಣೆಯಾಗಿರುವ ಈ ತಕ್ಷಣದಿಂದ ವರ್ಗಾವಣೆಗಳು, ಉದ್ಘಾಟನೆಗಳು ಮತ್ತು ಯೋಜನೆಗಳ ಪ್ರಕಟಣೆಗಳನ್ನು ಚುನಾವಣಾ ಆಯೋಗ ನಿಷೇಧಿಸಿದೆ.

ವಿಶ್ವದಲ್ಲಿ ಕಾಫಿಗೆ ಹಿರಿಮೆಯ ಸ್ಥಾನ

ಬಾಳೆಹೊನ್ನೂರು: ಪ್ರಪಂಚದಲ್ಲಿ ಪೆಟ್ರೋಲಿಯಂ ನಂತರದ ಎರಡನೆಯ ಸ್ಥಾನ ಕಾಫಿಗೆ ಇದೆ. ಇಂಥ ಕಾಫಿಯ ಬಗ್ಗೆ ಪ್ರಪಂಚದಲ್ಲೇ ಅತ್ಯುತ್ತಮವೆಂದು ಹೆಸರು ಪಡೆದ ಸಂಶೋಧನಾ ಕೇಂದ್ರ ಬಾಳೆಹೊನ್ನೂರಿನಲ್ಲಿರುವುದು ಈ ಜಿಲ್ಲೆಯ ಸೌಭಾಗ್ಯ. ಇಂದು ಭಾರತದಲ್ಲಿ 1 ಲಕ್ಷ ಹೆಕ್ಟೇರ್‌ಗೂ ಹೆಚ್ಚು ಭೂಮಿಯಲ್ಲಿ ಬೆಳೆಯಾತ್ತಿರುವ ಕಾಫಿಯ ಶೇ. 60 ಭಾಗ ಕರ್ನಾಟಕದಲ್ಲೇ ಬೆಳೆಯುತ್ತಿದೆ ಎಂದು ಜಿಲ್ಲೆಯ ಪ್ರಮುಖ ಕಾಫಿ ಬೆಳೆಗಾರರಲ್ಲೊಬ್ಬರಾದ ಪಿ. ಜಿ. ಗುರ್ಜರ್ ಹೇಳಿದರು.

ಜ. 19 ರಂದು, ಇಲ್ಲಿನ ಸುತ್ತಮುತ್ತಲ ರೊಬಸ್ಟಾ ಸಣ್ಣ ಬೆಳೆಗಾರರ ಅನುಕೂಲಕ್ಕಾಗಿ ಕಾಫಿ ಮಂಡಳಿ ಒದಗಿಸಿರುವ ಸಂಚಾರಿ ಕಾಫಿ ಹಲ್ಲರನ್ನು ಉದ್ಘಾಟಿಸಿದ ಅವರು, ಕಾಫಿ ಮಂಡಳಿ ಸಣ್ಣ ಬೆಳೆಗಾರರಿಗೆ ನೀಡುತ್ತಿರುವ ಹಲವು ಸವಲತ್ತು, ಉತ್ತೇಜನಗಳನ್ನು ಶ್ಲಾಘಿಸಿ ಅವುಗಳ ಪ್ರಯೋಜನ ಪಡೆಯುವಂತೆ ಕರೆ ನೀಡಿದರು.

ಹಾಜಿ ಅಬ್ದುಲ್ ಹಮೀದ್ ಅಧ್ಯಕ್ಷತೆ ವಹಿಸಿದ್ದು, ಕೆ.ಟಿ. ಚಿನ್ನಯ್ಯಗೌಡ, ನಂಜರಾಜ್, ಡಬ್ಲ್ಯೂ. ಕೃಷ್ಣಮೂರ್ತಿ ಮುಖ್ಯ ಅತಿಥಿಗಳಾಗಿದ್ದರು.

ಶೃಂಗೇರಿಯಲ್ಲಿ ಕುಂಭಾಭಿಷೇಕ ಆರಂಭ

ಶೃಂಗೇರಿ: ಇಲ್ಲಿನ ಮಲ್ಲಿಕಾರ್ಜುನ ಬೆಟ್ಟದ ಭವಾನೀ ಮಲಹಾನಿಕರೇಶ್ವರ ದೇವಾಲಯದ ಕುಂಭಾಭಿಷೇಕ ಮಹೋತ್ಸವ ಜ. 23 ರಿಂದ ಆರಂಭವಾಗಿದೆ.

ಸುಮಾರು 16 ಲಕ್ಷ ರೂ. ವೆಚ್ಚದಲ್ಲಿ, ಶಂಕರ ಮಠದ ವತಿಯಿಂದ ಈ ದೇವಾಲಯದ ಜೀರ್ಣೋದ್ಧಾರ ಪೂರ್ಣಗೊಂಡಿದ್ದು ಕುಂಭಾಭಿಷೇಕ ಸಂಬಂಧವಾಗಿ ನಡೆಯುವ ವಿವಿಧ ಕಾರ್ಯಕ್ರಮಗಳು ಫೆ. 12 ರ ವರೆಗೆ ನಡೆಯುತ್ತವೆ.

ಫೆ. 8 ರಂದು ಮಹಾ ರಥೋತ್ಸವ, 11 ರಂದು ಅತಿರುದ್ರ ಯಾಗ, 12 ರಂದು ಸಹಸ್ರಚಂಡಿ ಯಾಗ, ಪೂರ್ಣಾಹುತಿ ನಡೆಯುತ್ತವೆ.

ಸಮ್ಮೇಳನಗಳು

ಫೆ. 2 ಮತ್ತು 3 ರಂದು ಎಸ್.ಎಸ್. ರಾಘವಾಚಾರ್ ಅಧ್ಯಕ್ಷತೆಯಲ್ಲಿ ನಡೆಯುವ ಧರ್ಮ ಸಮ್ಮೇಳನವನ್ನು ಧರ್ಮಸ್ಥಳದ ಡಿ. ವೀರೇಂದ್ರ ಹೆಗ್ಗಡೆ ಉದ್ಘಾಟಿಸುವರು.

ಫೆ. 4 ಮತ್ತು 5 ರಂದು ಕನ್ನಡ, ಸಂಸ್ಕೃತ, ಹಿಂದಿ, ಇಂಗ್ಲೀಷ್, ತಮಿಳು, ತೆಲುಗು, ಮಲಯಾಳಂ ಭಾಷೆಗಳ ಉಪನ್ಯಾಸ ಕಾರ್ಯಕ್ರಮವನ್ನೊಳಗೊಂಡ ಸಾಹಿತ್ಯ ಸಮ್ಮೇಳನ ಪ್ರೊ|| ಎಂ. ಪಿ. ಎಲ್. ಶಾಸ್ತ್ರಿಯವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ.

ಇತರೆ ದಿನಗಳಲ್ಲಿ ಪ್ರತಿದಿನ ಸಂಜೆ ಶ್ರೀ ಮಠದ ಆವರಣದಲ್ಲಿ ಸಂಗೀತ, ಗಮಕ, ನಾಟಕ, ವಾದ್ಯವಾದನ ಮುಂತಾದ ಸಾಂಸ್ಕೃತಿಕ ಕಾರ್ಯಕ್ರಮಗಳು ನಡೆಯುತ್ತವೆ.

ವಿಶೇಷ ಪೋಲೀಸ್ ಬಂದೋಬಸ್ತ್

ಶೃಂಗೇರಿ: ಕುಂಭಾಭಿಷೇಕ ಮಹೋತ್ಸವಗಳ ಪ್ರಯುಕ್ತ ಕಾನೂನು ಮತ್ತು ಸುವ್ಯವಸ್ಥೆ ಕಾಪಾಡಲು ವಿಶೇಷ ಕ್ರಮಗಳನ್ನು ಕೈಗೊಂಡಿರುವುದಾಗಿ ಜಿಲ್ಲಾ ಪೋಲೀಸ್ ಮುಖ್ಯಾಧಿಕಾರಿ ಎಸ್. ಎಸ್. ಪಾವಟೆ ತಿಳಿಸಿದ್ದಾರೆ.

ಅಪರಾಧಿಗಳ ಪತ್ತೆಗಾಗಿ ವಿಶೇಷ ತರಬೇತಾದ ಪೋಲೀಸರನ್ನು ಹೊರ ಜಿಲ್ಲೆಯಿಂದ ಸಹ ತರಿಸಲಾಗಿದೆ. ವಿಶೇಷ ಪೋಲೀಸ್ ವೈರ್‌ಲೆಸ್ ಜಾಲ 24 ಗಂಟೆಯೂ ಕೆಲಸ ನಿರ್ವಹಿಸುವಂತೆ ಏರ್ಪಡಿಸಲಾಗಿದೆ.

ಸ್ನಾನ ಘಟ್ಟಗಳಲ್ಲಿ ಮತ್ತು ಮುಖ್ಯ ಬೀದಿಗಳಲ್ಲಿ ಸಾರ್ವಜನಿಕರಿಗೆ ಅವಶ್ಯಕ ಸಹಾಯ ನೀಡಲು ಪೋಲೀಸ್ ಸಿಬ್ಬಂದಿಗೆ ವಿಶೇಷ ತಿಳುವಳಿಕೆ ನೀಡಲಾಗಿದೆ. ಅಲ್ಲದೆ ಸಾರ್ವಜನಿಕರು ದೂರವಾಣಿ ಸಂಖ್ಯೆ 50 ನ್ನು ಸಂಪರ್ಕಿಸಿ ಪೋಲೀಸರ ಸಹಾಯ ಪಡೆಯಬಹುದಾಗಿದೆ.

ವಾಹನ ಸಂಚಾರ ಸುಗಮಗೊಳಿಸುವ ಸಲುವಾಗಿ ದೊಡ್ಡ ವಾಹನಗಳು ಓಡಾಡದಂತೆ ಪಟ್ಟಣದ ಸ್ವಾಗತ ಕಮಾನಿನಿಂದ ಮಠ ಮತ್ತು ಬಸ್ ಸ್ಟ್ಯಾಂಡ್‌ವರೆಗೆ ಒನ್ ವೇ ಆಗಿ ನಿರ್ಬಂಧಿಸಲಾಗಿದೆ.

ಕೆ. ಆರ್. ಸತೀಶ್‌ರ ಸ್ಪಷ್ಟೀಕರಣ

'ಮುಂಜಾವು' 20.1.85 ರ ಸಂಚಿಕೆಯಲ್ಲಿ ಶೃಂಗೇರಿ ಕ್ಷೇತ್ರಕ್ಕೆ ಕಾಂಗ್ರೆ ಅಭ್ಯರ್ಥಿ ಯಾರು ಎಂಬ ವಿಷಯದ ಸಮೀಕ್ಷೆಯಲ್ಲಿ ಕೆ.ಆರ್. ಸತೀಶ್ ಬಗ್ಗೆ 'ಯಾವುದೇ ಸರಕನ್ನೂ ಬೆನ್ನಿಗೆ ಕಟ್ಟಿಕೊಳ್ಳದೆ ಟಿಕೆಟ್ ಕೇಳುತ್ತಿದ್ದಾರೆ' ಎಂದಿರುವ ಮಾತಿನ ಬಗ್ಗೆ ಸತೀಶ್ ಈ ಕೆಳಗಿನ ಸ್ಪಷ್ಟೀಕರಣ ನೀಡಿದ್ದಾರೆ:

"ನಾನು ಮೂಡಿಗೆರೆಯಲ್ಲಿ ಕಾಂಗ್ರೆ ಪಕ್ಷದಲ್ಲೂ ಸಾರ್ವಜನಿಕ ರಂಗದಲ್ಲೂ ಶ್ರದ್ಧೆ, ನಿಷ್ಠೆಗಳಿಂದ ಕೆಲಸ ಮಾಡಿದ್ದಲ್ಲದೆ, ಶೃಂಗೇರಿ ಕ್ಷೇತ್ರಕ್ಕೆ (ಜಯಪುರಕ್ಕೆ) ಬಂದ ನಂತರದ ನನ್ನ ಕೆಲಸಗಳ ಪರಿಚಯ ಸಾರ್ವಜನಿಕರಿಗೆ ಮಾಡಿಕೊಡಬಯಸುತ್ತೇನೆ.

1979 ರ ಚುನಾವಣೆಯಲ್ಲಿ ಡಿ. ಎಂ. ಪುಟ್ಟೇ ಗೌಡರ ಪರವಾಗಿ, ಮತ್ತು 1982 ರ ಚುನಾವಣೆಯಲ್ಲಿ ಬೇಗಾನೆ ರಾಮಯ್ಯನವರ ಪರವಾಗಿ ಶ್ರದ್ಧೆಯಿಂದ ಕೆಲಸ ಮಾಡಿದ್ದೇನೆ. 1979 ರಲ್ಲಿ ಜಿಲ್ಲಾ ಕಾಂಗ್ರೆ ಉಪಾಧ್ಯಕ್ಷನಾಗಿ ಸಂಘಟನೆ ಮಾಡಿದ್ದೇನೆ. ಶೃಂಗೇರಿ, ಕೊಪ್ಪ, ನ.ರಾ. ಪುರ ಮೂರೂ ತಾ|| ಗಳಲ್ಲೂ ಜನಸಂಪರ್ಕ ಹೊಂದಿದ್ದು, ಸಾರ್ವಜನಿಕರ ಜನಸಾಮಾನ್ಯರ ಸಮಸ್ಯೆಗಳ ಇತ್ಯರ್ಥಕ್ಕಾಗಿ ಶ್ರಮಿಸಿದ್ದೇನೆ.

ಕ್ಷೇತ್ರದಲ್ಲಿ ಮಟ್ಕಾ ಮತ್ತು ಕಳ್ಳಸಾಗಾಣಿಕೆ ತಡೆಯುವಲ್ಲಿ ನಾನು ಪೋಲೀಸ್ ಇಲಾಖೆಗೆ ನೀಡಿದ ನೆರವು-ಸಹಕಾರ ಒಂದು ದಾಖಲೆಯಾಗಬಹುದು.

ಈ ಮೇಲ್ಕಂಡ ಅರ್ಹತೆಗಳೊಂದಿಗೆ ಪಕ್ಷದ ಟಿಕೆಟ್‌ಗಾಗಿ ಅರ್ಜಿ ಸಲ್ಲಿಸಿದ್ದೇನೆ."

ಕೊಪ್ಪ ತಾ|| ತಲಮಕ್ಕಿ ಜಿಲ್ಲೆಯ ಅತ್ಯುತ್ತಮ ಪಂಚಾಯ್ತಿ

ಕೊಪ್ಪ: ಈ ತಾಲ್ಲೂಕಿನ ತಲಮಕ್ಕಿ ಗ್ರಾಮ ಪಂಚಾಯ್ತಿ (ಕುದುರೆಗುಂಡಿ) 1984-85 ನೇ ಸಾಲಿಗೆ ಜಿಲ್ಲೆಯ ಅತ್ಯುತ್ತಮ ಪಂಚಾಯ್ತಿಯೆಂಬ ಪ್ರಶಸ್ತಿ ಪಡೆದಿದೆ. ನ.ರಾ. ಪುರ ತಾ|| ಸೀತೂರು ಪಂಚಾಯ್ತಿ 2ನೇ ಸ್ಥಾನ ಗಳಿಸಿದೆ.

ತಲಮಕ್ಕಿ ಪಂಚಾಯ್ತಿ 1981-82 ರಲ್ಲಿ ಪ್ರಥಮ ಸ್ಥಾನವನ್ನೂ, 82-83 ರಲ್ಲಿ 2 ನೇ ಸ್ಥಾನವನ್ನೂ ಗಳಿಸಿತ್ತು. ಆ ವರ್ಷ ಮೊದಲ ಸ್ಥಾನ ನಾರ್ವೆ ಪಂಚಾಯ್ತಿಗೆ ದಕ್ಕಿತ್ತು. 83-84 ರಲ್ಲಿ ಪ್ರಥಮ ಸ್ಥಾನವನ್ನು ತಲಮಕ್ಕಿ ಪುನಃ ಗೆದ್ದುಕೊಂಡಿದೆ.

ಶಿವಮೊಗ್ಗ ಅಡಿಕೆ ಪೇಟೆ

ತಾರೀಕು: 24-1-1985

ಸರಕು: 2841 – 3029

ಬೆಟ್ಟೆ: 1973 – 2232

ಗೊರಬಲು: 835 – 1557

ಚುನಾವಣೆ: ಶೃಂಗೇರಿ ಕ್ಷೇತ್ರದ ಅಭ್ಯರ್ಥಿಗಳ ಅಂತಿಮ ಆಯ್ಕೆ ಇನ್ನೂ ಆಗಿಲ್ಲ

ಕೊಪ್ಪ: ಶೃಂಗೇರಿ ವಿಧಾನಸಭಾ ಕ್ಷೇತ್ರದಿಂದ ಅಭ್ಯರ್ಥಿಗಳು ಯಾರೆಂಬ ಬಗ್ಗೆ ಇನ್ನೂ ನಿರ್ದಿಷ್ಟ ಸುಳಿವು ಸಿಕ್ಕಿಲ್ಲ.

ಜನತಾದಿಂದ ಹೆಚ್.ಜಿ. ಗೋವಿಂದ ಗೌಡರಲ್ಲದೆ, ಮಾಗ ಚಂದ್ರಶೇಖರ್ ಹೆಸರು ಕೂಡ ಸೂಚಿಸಲ್ಪಟ್ಟಿದೆ ಎನ್ನಲಾಗಿದೆ. ಆದರೆ ಗೋವಿಂದ ಗೌಡರೇ ಸ್ಪರ್ಧಿಸುವುದು ಬಹುಪಾಲು ಖಚಿತವಾಗಿದೆ.

ಕಾಂಗ್ರೆಯೊಳಗೆ ಇನ್ನೂ ಅನಿಶ್ಚಿತತೆ ಮುಂದುವರಿದಿದೆ. ಯಾವ ಆಕಾಂಕ್ಷಿಯನ್ನು ಕೇಳಿದರೂ ಟಿಕೆಟ್ ತಮಗೇ ಸಿಗುವುದು ಬಹುಪಾಲು ಖಚಿತ ಎನ್ನುತ್ತಿದ್ದಾರೆ. ಬೇಗಾನೆಯವರಿಗೆ ಟಿಕೆಟ್ ಸಿಗಲಾರದೆಂದೂ ಯು. ಕೆ. ಶಾಮಣ್ಣ ಅವರಿಗೆ ಟಿಕೆಟ್ ಸಿಗುವ ಸಂಭವವಿದೆಯೆಂದೂ ದಟ್ಟವಾದ ಸುದ್ದಿಗಳಿವೆ. ಯುವಕರಾಗಿ ಮಾಗ ಶ್ರೀನಿವಾಸ್ ಹೆಸರು ಕೇಳಿ ಬರುತ್ತಿದೆ. ಯಾವುದೂ ಜ. 28 ರಂದು ಅಂತಿಮ ತೀರ್ಮಾನವಾಗುವುದಾಗಿ ಹೇಳಲಾಗಿದೆ.

ಕ್ಷೇತ್ರದಿಂದ ಈ ಸಲ ಬಿಜೆಪಿ ಕೂಡ ಅಭ್ಯರ್ಥಿ ನಿಲ್ಲಿಸಲು (ಕ್ಷೇತ್ರೀಯ ಮತ್ತು ಜಿಲ್ಲಾ ಮಟ್ಟದಲ್ಲಿ) ನಿರ್ಧರಿಸಿದ್ದು, ಬಿ.ಎಸ್. ವಿಠಲರಾವ್, ರಘುನಾಥ್, ಶ್ರೀಕಂಠಭಟ್, ಕೃಷ್ಣಭಟ್, ಕೆ. ವಿ. ಶಿವಸ್ವಾಮಿ ಮತ್ತು ಅಲಗೆ ವಿಜಯಾನಾಥನ ಇವರುಗಳ ಹೆಸರುಗಳು ಕೇಳಿಬರುತ್ತಿವೆ.

ರಾಜ್ಯ ರೈತ ಸಂಘ ಕೂಡ ಜಿಲ್ಲೆಯ ಶೃಂಗೇರಿ, ಚಿಕ್ಕಮಗಳೂರು, ಬೀರೂರು, ಮೂಡಿಗೆರೆ ಕ್ಷೇತ್ರಗಳಿಂದ ಸ್ಪರ್ಧಿಸಲು ನಿರ್ಧರಿಸಿದೆ. ಅಭ್ಯರ್ಥಿ ಯಾರೆಂದು ಗೊತ್ತಾಗಿಲ್ಲ.

ಕ್ಷೇತ್ರದಿಂದ ಸ್ಪರ್ಧಿಸಲು ಬಿಜೆಪಿ ಸಮಿತಿ ನಿರ್ಧಾರ

ಕೊಪ್ಪ: ಶೃಂಗೇರಿ ಕ್ಷೇತ್ರದಿಂದ ಈ ಸಲ ತನ್ನ ಅಭ್ಯರ್ಥಿಯನ್ನು ನಿಲ್ಲಿಸಲು ಬಿಜೆಪಿ ಕ್ಷೇತ್ರೀಯ ಸಮಿತಿ ಸರ್ವಾನುಮತದಿಂದ ನಿರ್ಧರಿಸಿದೆ. ಅಭ್ಯರ್ಥಿಯಾಗಬಯಸುವವರು ಕ್ಷೇತ್ರೀಯ ಕಾರ್ಯದರ್ಶಿ ಕೆ. ವಿ. ಶಿವಸ್ವಾಮಿಯವರಿಗೆ ಅಭ್ಯರ್ಥನ ಪತ್ರ ತಲುಪಿಸುವಂತೆ ಸೂಚಿಸಲಾಗಿದೆ.

ಈವರೆಗೆ ಸಮಿತಿಗೆ ನಾಲ್ಕು ಹೆಸರುಗಳು ಸೂಚಿತವಾಗಿದ್ದು, ಜ. 30 ರಂದು ಕೊಪ್ಪದಲ್ಲಿ ಕರೆಯಲಾಗಿರುವ ಕ್ಷೇತ್ರದ ಕಾರ್ಯಕರ್ತರ ಸಭೆಯಲ್ಲಿ ಅಂತಿಮ ಪಟ್ಟಿ ಸಿದ್ಧವಾಗಲಿದೆ.

ಚಂದಾ ಸಂಗ್ರಹಣೆಗೆ ಹೋಗಬೇಕಾಗುವುದರಿಂದ ಮುಂದಿನ 3-2-85 ರ ಸಂಚಿಕೆ ಪ್ರಕಟವಾಗುವುದಿಲ್ಲ. —ಸಂ

ಭಾರತದಲ್ಲಿ 'ಗಣರಾಜ್ಯ' ವ್ಯವಸ್ಥೆ

—ಒಂದು ಚಿಂತನೆ

ನಮ್ಮ ದೇಶದಲ್ಲಿ ಜನವರಿ 26 ನೇ ತಾರೀಖಿನಂದು 'ಗಣರಾಜ್ಯೋತ್ಸವ' ಎಂಬ ಸಮಾರಂಭವನ್ನು ಆಚರಿಸುತ್ತೇವೆ. 'ಸ್ವಾತಂತ್ರ್ಯದಿನ' ಮತ್ತು 'ಗಾಂಧಿ ಜಯಂತಿ' ಯಂತೆ ಈ ಗಣರಾಜ್ಯದಿನವೂ ಒಂದು ರಾಷ್ಟ್ರೀಯ ಹಬ್ಬವೆಂದು ಘೋಷಿಸಲ್ಪಟ್ಟಿದೆ.

ಭಾರತ ಬ್ರಿಟಿಷರಿಂದ 'ಸ್ವತಂತ್ರ'ವಾದ ಮೇಲೆ ದೇಶದ ಆಡಳಿತ ಸೂತ್ರಗಳನ್ನು ನಿರೂಪಿಸುವ ಸಂವಿಧಾನ ಅಂಗೀಕರಿಸಲ್ಪಟ್ಟು 1950 ರ ಜನವರಿ 26 ರಂದು ದೇಶವನ್ನು ಸ್ವತಂತ್ರ, ಸಾರ್ವಭೌಮ, ಪ್ರಜಾಸತ್ತಾತ್ಮಕ ಗಣರಾಜ್ಯವೆಂದು ಘೋಷಿಸಲಾಯಿತು. ಅದರ ನೆನಪಿಗಾಗಿಯೇ ಈ ದಿನಾಚರಣೆ.

ಇಲ್ಲಿ, ನಮ್ಮ ದೇಶದ ಸ್ವಾತಂತ್ರ್ಯ ಮತ್ತು ಸಾರ್ವಭೌಮತ್ವಗಳ ಬಗ್ಗೆ ಚರ್ಚಿಸಹೋಗುವುದಿಲ್ಲ. ಗಣರಾಜ್ಯ ಎಂಬ ಕಲ್ಪನೆಯ ಬಗ್ಗೆ ಮಾತ್ರ ಸ್ವಲ್ಪ ಚರ್ಚಿಸೋಣ. (ಆದರೆ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ, ಗಣರಾಜ್ಯ ತತ್ವ ಮುಂತಾದ ಸುಂದರ ಕಲ್ಪನೆಗಳು ನಮ್ಮ ದೇಶದಲ್ಲಿ ಬಳಕೆಯಾಗಿರುವ ರೀತಿಯ ಬಗ್ಗೆ ಮಾತಾಡಲು ಹೊರಟರೆ ನಕಾರಾತ್ಮಕವಾದ ಅಂಶಗಳೇ ಎದ್ದು ಬರುವುದು, ಬರೀ ವಿಷಾದದ ಭಾವವೇ ತುಂಬಿಕೊಳ್ಳುವುದು ಮಾತ್ರ ನಮ್ಮ ದುರಂತ.)

ಕೇಂದ್ರಿಕೃತ ಆಡಳಿತದಡಿ

ಹಲವು ಪ್ರಾಂತ್ಯ ಅಥವಾ ಪ್ರದೇಶಗಳು ಒಟ್ಟುಗೂಡಿದ ಒಂದು ವಿಶಾಲ ದೇಶದ ಜನತೆಯಲ್ಲಿ ರಾಷ್ಟ್ರದ ಕಲ್ಪನೆ ಸ್ಥೂಲವಾಗಿ ಇರಬಹುದಾದರೂ ಪ್ರಾದೇಶಿಕ ವಿಶಿಷ್ಟತೆಗಳು, ಆಸೆ-ಆಕಾಂಕ್ಷೆಗಳು (ಆಶೋತ್ತರಗಳು) ವಿಭಿನ್ನವಾಗಿರುತ್ತವೆ. ಈ ಎಲ್ಲಾ ಪ್ರದೇಶಗಳನ್ನೂ ಒಂದೇ ಬಿಗಿಯಾದ ಕೇಂದ್ರೀಕೃತ ಆಡಳಿತದಡಿ ಬಂಧಿಸಿದರೆ ಆಯಾ ಪ್ರಾದೇಶಿಕ ಆಶೋತ್ತರಗಳು ಹೊಮ್ಮಿ ಪೂರೈಕೆಯಾಗುವುದಾಗಲೀ, ಪ್ರಾದೇಶಿಕ ವಿಶಿಷ್ಟತೆಗಳು ಅಭಿವೃದ್ಧಿ ಹೊಂದುವುದಾಗಲೀ, ಅಲ್ಲಲ್ಲಿನ ಸಂಪನ್ಮೂಲಗಳಿಂದಾಗಿ ಆಯಾ ಪ್ರದೇಶದ ಸರ್ವತೋಮುಖ ಅಭಿವೃದ್ಧಿಯಾಗಲೀ ಸಾಧ್ಯವಾಗುವುದಿಲ್ಲ. ಇಡೀ ದೇಶವನ್ನು ಶಾಂತಿ ಮತ್ತು ನೆಮ್ಮದಿಯಿಂದ ನಡೆಸುವುದು ಕಷ್ಟವಾಗುತ್ತದೆ.

ಅಲ್ಲದೆ ಇಂಥ ಕೇಂದ್ರೀಕೃತ ಆಡಳಿತ ವ್ಯವಸ್ಥೆ ದೇಶದ ಮೂಲೆ ಮೂಲೆಯನ್ನು ತನ್ನ ಮುಷ್ಟಿಯ ವ್ಯಾಪ್ತಿಗೆ ತಂದು ಕೊಳ್ಳುವುದರಿಂದ ಯಾವುದೇ ಒಂದು ಹಳ್ಳಿಯ ಚಿಕ್ಕ ಸಮಸ್ಯೆಯ ಇತ್ಯರ್ಥಕ್ಕೂ ಕೇಂದ್ರ ಸರ್ಕಾರದ ಬಳಿಗೆ ಹೋಗಬೇಕಾಗುತ್ತದೆ. ಸಮಸ್ಯೆಗಳ ರಾಶಿ ಬೆಳೆಯುತ್ತದೆ.

ರಾಜ್ಯಗಳ ಒಕ್ಕೂಟ-ಗಣರಾಜ್ಯ

ಮೇಲೆ ಹೇಳಿದಂಥ ಪರಿಸ್ಥಿತಿಗೆ ಗಣರಾಜ್ಯದ ಕಲ್ಪನೆ ಬೆಳೆದು ಬಂದದ್ದು. ದೇಶವೆಂದರೆ ವಿಭಿನ್ನ ಪ್ರಾಂತ್ಯ-ಪ್ರದೇಶಗಳ (ರಾಜ್ಯಗಳ) ಒಂದು ಒಕ್ಕೂಟ (ಫೆಡರೇಶನ್) ಮಾತ್ರ. ದೇಶದ ಗಡಿಗಳ ರಕ್ಷಣೆ, ವಿದೇಶ ನೀತಿ ಮುಂತಾಗಿ ಹೊರ ಪ್ರಪಂಚದೊಂದಿಗಿನ ನಮ್ಮ ಸಂಬಂಧಗಳ ವಿಷಯ ಮಾತ್ರ ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿದ್ದು, ಉಳಿದಂತೆ ಎಲ್ಲಾ ರಾಜ್ಯಗಳೂ ಹೆಚ್ಚು ಸ್ವಯಮಾಧಿಕಾರ ಹೊಂದಿರಬೇಕು. ಈ ಒಕ್ಕೂಟದ ವಿಭಿನ್ನ ರಾಜ್ಯಗಳ ನಡುವೆ ಪರಸ್ಪರ ಸಹಕಾರದ, ಕೊಡು-ಕೊಳ್ಳುವ ಸಂಬಂಧದ ಮೂಲಕ ಸಂಪತ್ತು-ಸಂಪನ್ಮೂಲಗಳ ವಿನಿಮಯವಾಗಬೇಕು. ಹೊರತು ಲೂಟಿಯ-ಬಲಾತ್ಕಾರದ ಸಂಬಂಧದ ಮೂಲಕ ಅಲ್ಲ.

ಹೀಗಾದಾಗ, ಆರ್ಥಿಕ-ಸಾಂಸ್ಕೃತಿಕ ಕ್ಷೇತ್ರಗಳಲ್ಲಿ ಹಿಂದುಳಿದಿರುವ ಪ್ರದೇಶಗಳ ಮೇಲೆ ಮುಂದುವರಿದ ಇನ್ನೊಂದು ಪ್ರದೇಶದವರ ಆಧಿಪತ್ಯ-ದಬ್ಬಾಳಿಕೆ ನಡೆಯುವುದಿಲ್ಲ. ಕೆಲವೇ ಕೆಲವು ಬಲಿಷ್ಠ ಕುಳಗಳಿಂದ, ಆಯಾ ಪ್ರಾದೇಶಿಕ ಅಭಿವೃದ್ಧಿಯ ಕಾಳಜಿಯಿಲ್ಲದೆ, ಸಂಪನ್ಮೂಲಗಳ ಲೂಟಿ ತಪ್ಪುತ್ತವೆ. ಸಮಾನತೆ, ಸಹಕಾರಗಳ ಆಧಾರದ ಮೇಲೆ ವಿವಿಧ ಪ್ರದೇಶಗಳ ಜನರಲ್ಲಿ ಅರಿವು-ಮೈತ್ರಿ ಹೆಚ್ಚುತ್ತದೆ. ಇದರಿಂದ ಗಣರಾಜ್ಯ ಅಥವಾ ದೇಶ ಇನ್ನಷ್ಟು ಬಲಿಷ್ಠವಾಗುವುದು ಮಾತ್ರವಲ್ಲ, ದೇಶದ ಎಲ್ಲಾ ಭಾಗಗಳೂ ಸರಿಸುಮಾರಾಗಿ ಒಂದೇ ರೀತಿ ಅಭಿವೃದ್ಧಿ ಹೊಂದುತ್ತವೆ...

ಇದು ಸ್ಥೂಲವಾಗಿ ಗಣರಾಜ್ಯ ತತ್ವದ ತಿರುಳು.

ಗಾಂಧೀಜಿ ಮೊದಲ್ಗೊಂಡು ಈ ದೇಶದ ಎಲ್ಲಾ ದೇಶಪ್ರೇಮಿ-ಪ್ರಜಾಪ್ರಭುತ್ವ ಪ್ರೇಮಿಗಳ-ಅಪೇಕ್ಷೆ, ಇಡೀ ವಿಶ್ವದ ಎಲ್ಲಾ ಪ್ರಜ್ಞಾವಂತರ—ಇಂದಿನ ಬಹು ಮುಖ್ಯ ಆಶೋತ್ತರವಾದ ವಿಕೇಂದ್ರೀಕರಣವೂ ಈ ಗಣರಾಜ್ಯ ತತ್ವದಲ್ಲಿಯೇ ಅಡಕವಾಗುತ್ತದೆ.

ಇಂಥ ಪದ್ಧತಿಯಲ್ಲೇ ಸರ್ವತೋಮುಖ ಅಭಿವೃದ್ಧಿ ಸಾಧಿಸುತ್ತಿರುವ ಅಮೆರಿಕ (ಸಂಯುಕ್ತ ಸಂಸ್ಥಾನಗಳು), ಜರ್ಮನಿ (ಗಣರಾಜ್ಯ), ರಷ್ಯ (ಸೋವಿಯತ್ ಒಕ್ಕೂಟ), ಚೀನಾ (ಜನತಾ ಗಣರಾಜ್ಯ) ಮುಂತಾದ ಹಲವು ಉದಾಹರಣೆಗಳು ನಮ್ಮ ಮುಂದಿವೆ.

ಭಾರತ 'ಗಣರಾಜ್ಯ'

ಈ ಎಲ್ಲ ವಿಚಾರಗಳ ಬೆಳಕಿನಲ್ಲಿ ನಮ್ಮ ದೇಶವನ್ನು ನೋಡಿದಾಗ ಹೇಗನ್ನಿಸುತ್ತದೆ? ಇದನ್ನೊಂದು 'ಗಣರಾಜ್ಯ'ವೆಂದು ಕರೆದುಕೊಳ್ಳುವಾಗ ನಮ್ಮ ಮನಸ್ಸು ಹೆಮ್ಮೆ, ಆತ್ಮವಿಶ್ವಾಸಗಳಿಂದ ಅರಳುತ್ತದೆಯೋ, ನೋವು, ಅಪಮಾನಗಳಿಂದ ಮುದುಡುತ್ತದೆಯೋ?

ದೇಶದ ಮುಕ್ಕಾಲು ಭಾಗಕ್ಕೂ ಹೆಚ್ಚು ಜನ ವಾಸಿಸುವ ಹಳ್ಳಿಗಳ ಅತಿ ಹತ್ತಿರದ ಆಡಳಿತ ಸಮಿತಿಯಾದ ಗ್ರಾಮ ಪಂಚಾ

(3 ನೇ ಪುಟಕ್ಕೆ)

ಚಿಕ್ಕಮಗಳೂರು ಜಿಲ್ಲೆ ಪುನರ್ವಿಂಗಡಣೆ ಬಗ್ಗೆ

ವಾಸುದೇವರಾವ್ ಆಯೋಗದ ಶಿಫಾರಸು

ರಾಜ್ಯದ ಜಿಲ್ಲೆ ಮತ್ತು ತಾಲ್ಲೂಕುಗಳ ಪುನರ್ ವಿಂಗಡನೆ ಬಗ್ಗೆ ನೇಮಿಸಿದ್ದ ವಾಸುದೇವರಾವ್ ಆಯೋಗ ಚಿಕ್ಕಮಗಳೂರು ಜಿಲ್ಲೆ ವಿಂಗಡಣೆ ಬಗ್ಗೆ ಕೆಳಕಂಡಂತೆ ಶಿಫಾರಸ್ಸು ಮಾಡಿದೆ.

ನರಸಿಂಹರಾಜಪುರ ತಾಲ್ಲೂಕನ್ನು ರದ್ದು ಮಾಡಿ ಆ ತಾಲ್ಲೂಕಿಗೆ ಸೇರಿದ ಗ್ರಾಮಗಳನ್ನು ಕೊಪ್ಪ, ಶೃಂಗೇರಿ, ತರೀಕೆರೆ. ಶಿವಮೊಗ್ಗಕ್ಕೆ ಸೇರಿಸಲು ಸಲಹೆ ಮಾಡಿದೆ.

ನರಸಿಂಹರಾಜಪುರ ತಾಲ್ಲೂಕಿನ ದಂಡು ಬಿಟ್ಟಾರ, ಕತ್ತಲೆಖಾನ್, ಜೈರೇಖಾನ್ ಹಾಗೂ ನಂದಿಗಾವೆ ಗ್ರಾಮಗಳನ್ನು ತರೀಕೆರೆ ತಾಲ್ಲೂಕಿಗೂ,

ಬಾಳೆಹೊನ್ನೂರು, ಬಿ. ಕಣಬೂರು, ಮೇಗರಮಕ್ಕಿ, ಕೋಲೆ, ಮುದಗುಣಿ, ಕಾರೆಹಡ್ಲು, ಬನ್ನೂರು, ಮಾಗುಂಡಿ, ಹಲಸೂರು ಗ್ರಾಮಗಳನ್ನು ಶೃಂಗೇರಿ ತಾಲ್ಲೂಕಿಗೂ ಕೆ. ಕಣಬೂರು, ಕಸಬೂರು, ನೆಲಗದ್ದೆ, ಹೊಸಹಳ್ಳಿ, ಬೈರಾಪುರ ಗ್ರಾಮಗಳನ್ನು ಶಿವಮೊಗ್ಗ ತಾಲ್ಲೂಕಿಗೂ

ನ.ರಾ. ಪುರ ತಾಲ್ಲೂಕಿನ ಉಳಿದೆಲ್ಲ ಗ್ರಾಮಗಳನ್ನು ಕೊಪ್ಪ ತಾಲ್ಲೂಕಿಗೂ, ಸೇರಿಸಿ ನ. ರಾ. ಪುರ ತಾಲ್ಲೂಕನ್ನು ರದ್ದುಪಡಿಸಲು ಆಯೋಗ ಶಿಫಾರಸು ಮಾಡಿದೆ.

ಶೃಂಗೇರಿ ತಾಲ್ಲೂಕಿಗೆ

ಕೊಪ್ಪ ತಾ|| ನ ಮೇಗುಂದ ಹೋ|| ಹಿರೇಗದ್ದೆ, ಜಯಪುರ, ಲೋಕನಾಥಪುರ, ಹೊಸೂರು, ಆಡಿಗೆಬೈಲು, ಹಳ್ಳಿಕೆರೆ, ದೇವಗೋಡು, ಎಲೆಮಡಲು, ಹೇರೂರು, ಸ್ತಿರೂರು, ಹೊನ್ನಗುಂಡಿ, ಹೆರ್ತನಕೊಡಿಗೆ, ಬೆತ್ತದಕೊಳಲು, ಅತ್ತೀಕೊಡಿಗೆ, ಮೂರುಗದ್ದೆ, ವಾಟೆಬಚ್ಚಲಖಾನ್, ಗುಡ್ಡೆತೋಟ, ಕಲ್ಲುಗುಡ್ಡೆ, ಮೇಗೂರು, ಹರುವೆ, ಭೈರೇದೇವರು, ಹುಲಿಗರಡಿ, ಅಗಳಗಂಡಿ, ದಯಂಬಳ್ಳಿ, ಕೂಳೂರು, ಹೆಗ್ಗಾರು-ಒಟ್ಟು 24 ಗ್ರಾಮಗಳನ್ನು ಶೃಂಗೇರಿ ತಾಲ್ಲೂಕಿಗೆ ಸೇರಿಸಲು ಆಯೋಗ ಶಿಫಾರಸು ಮಾಡಿದೆ.

ಕೊಪ್ಪ ತಾಲ್ಲೂಕಿಗೆ

ಬಾಳೆಹೊನ್ನೂರು ಹೋಬಳಿಯ 9 ಗ್ರಾಮಗಳಾದ ಗುಬ್ಬಿಗ, ಕಮಲಾಪುರ, ಸೀತೂರು, ಕಾನೂರು, ಶೇಡಿಗಾರು, ಈಚಿಕೆರೆ, ಸಂಕ್ಸೆ, ವಗ್ಗದ್ದೆಗಳನ್ನು ಕೊಪ್ಪ ತಾಲ್ಲೂಕಿಗೆ ವರ್ಗಾಯಿಸಬಹುದೆಂದು ಆಯೋಗ ಹೇಳಿದೆ.

ಹೊಸ ಉಪವಿಭಾಗಗಳು

ಚಿಕ್ಕಮಗಳೂರು ಮತ್ತು ತರೀಕೆರೆ ಉಪವಿಭಾಗಗಳನ್ನು ಕಡೂರು, ಶೃಂಗೇರಿ ಉಪವಿಭಾಗಗಳೆಂದು ನಾಮಕರಣ ಮಾಡಲು ಆಯೋಗ ಸಲಹೆ ಮಾಡಿದ್ದು, ಕಡೂರು ಉಪ ವಿಭಾಗಕ್ಕೆ ಕಡೂರು, ತರೀಕೆರೆ, ಚಿಕ್ಕಮಗಳೂರು ತಾಲ್ಲೂಕುಗಳು ಸೇರಿರುವಂತೆ ಹಾಗೂ ಶೃಂಗೇರಿ ಉಪವಿಭಾಗಕ್ಕೆ ಶೃಂಗೇರಿ, ಕೊಪ್ಪ, ಮೂಡಿಗೆರೆ ತಾಲ್ಲೂಕುಗಳು ಸೇರಿರುವಂತೆ ಶಿಫಾರಸು ಮಾಡಿದೆ.

ಶ್ರೋತೃಗಳ ಮನ ತಣಿಸಿ, ಕಲಾ ಪ್ರತಿಭೆಗೆ ಇಂಬು ಕೊಟ್ಟ

ಪುರಂದರರ, ತ್ಯಾಗರಾಜರ ಆರಾಧನೋತ್ಸವ

ಹರಿಹರಪುರಕ್ಕೆ ಸಮೀಪದ ಸೂರಳಿಯಲ್ಲಿ ಪುರಂದರ ದಾಸರ ಮತ್ತು ತ್ಯಾಗರಾಜರ ಆರಾಧನಾ ಮಹೋತ್ಸವ ಸಮಿತಿಯ ಮೂರನೇ ವರ್ಷದ ಸಂಗೀತೋತ್ಸವ ಅಪಾರ ಶ್ರೋತೃಗಳ ಮನಸ್ಸನ್ನು ಸೂರೆಗೊಂಡಿತು. ಕಳೆದ ಎರಡು ವರ್ಷಗಳಿಗಿಂತಲೂ ಈ ವರ್ಷದ ಕಾರ್ಯಕ್ರಮ ಆಹ್ವಾನಿತ ವಿದ್ವಾಂಸರುಗಳಿಂದ ಹಾಗೂ ಕಲಾಭಿಮಾನಿಗಳಿಂದ ಅತ್ಯಂತ ವಿಜೃಂಭಣೆಯಿಂದ ನಡೆಯಿತು.

ಜ. 11 ರಂದು ಬೆಳಿಗ್ಗೆ ಹರಿಹರಪುರ ಮಠಾಧೀಶರು ಆರಾಧನೋತ್ಸವ ಉದ್ಘಾಟಿಸಿದರು. 10 ಘಂಟೆಗೆ ವಿದ್ವಾನ್ ಮಥೂರು ಪಿ. ಬಾಲಸುಬ್ರಮಣ್ಯಂ ಮತ್ತು ಬಳಗದವರಿಂದ ಶ್ರೀ ತ್ಯಾಗರಾಜ ಪಂಚರತ್ನ ಕೀರ್ತನೆಯ ಹಾಡುಗಾರಿಕೆ ನಡೆಯಿತು.

ಸಂಜೆಯ ಸಂಗೀತ ಕಾರ್ಯಕ್ರಮದಲ್ಲಿ ಊರ-ಪರವೂರ ಅನೇಕ ವಿದ್ವಾಂಸರು ಹಾಡುಗಾರಿಕೆಯಲ್ಲಿಯೂ ವಾದನದಲ್ಲೂ ಭಾಗವಹಿಸಿದ್ದರು. ಅಂದಿನ ಕೊನೆಯ ಎರಡು ಕಾರ್ಯಕ್ರಮಗಳಲ್ಲಿ ಬೆಂಗಳೂರಿನಿಂದ ಆಗಮಿಸಿದ ವಿದ್ವಾನ್ ಎಸ್. ಲಕ್ಷ್ಮಣ ಶಾಸ್ತ್ರಿಯವರಿಂದ ಸುಶ್ರಾವ್ಯ ಗಾಯನ ಹಾಗೂ ನಂತರ ಮೂಲ್ಕಿಯ ರಾಘವೇಂದ್ರ ರಾವ್ ರವರು ತಮ್ಮ ಚಿರಂಜೀವಿಗಳೊಂದಿಗೆ ನಡೆಸಿದ ವೇಣು ವಾದನ ಕಚೇರಿ ಉತ್ಸವಕ್ಕೆ ಕಳೆ ಕಟ್ಟಿದವು.

ಮರುದಿನದ ಸಂಗೀತ ಕಚೇರಿಯಲ್ಲಿ ರಾಜ್ಯದ ಹಲವಾರು ಕಡೆಗಳಿಂದ ಆಗಮಿಸಿದ ವಿದ್ವಾಂಸರು ಕಾರ್ಯಕ್ರಮಗಳನ್ನು ಕೊಟ್ಟರು. ನಂತರ ಕೊನೆಯ ಎರಡು ಮುಖ್ಯ ಕಾರ್ಯಕ್ರಮಗಳಲ್ಲಿ ಶಿವಮೊಗ್ಗದ ಪ್ರಸಿದ್ಧ ವೀಣಾವಾದಕಿ ಕು|| ಮಂಗಳಾ ರಾಮನ್

ಸಮೀಕ್ಷೆ:
ಸೂರಳಿ ಆರ್. ಗಣೇಶ ಮೂರ್ತಿ

ವಿದ್ವಾನ್ ಕಾಂಚನ ವಿ. ಮೂರ್ತಿಯವರ ಮೃದಂಗ ವಾದನದೊಂದಿಗೆ ನೀಡಿದ ಕಚೇರಿ ಶ್ರೋತೃಗಳಿಂದ ಮೆಚ್ಚುಗೆಯನ್ನು ಪಡೆಯಿತು. ಕೊನೆಯಲ್ಲಿ ಮದ್ರಾಸಿನ ಸುಚೀಂದ್ರ ಕೃಷ್ಣಮೂರ್ತಿಯವರ ಕಚೇರಿ ವಿದ್ವತ್‌ಪೂರ್ಣವೂ, ರಂಜನೀಯವೂ ಆಗಿತ್ತು.

ಕೊನೆಗೆ ನುಗ್ಗಿಮಕ್ಕಿ ವೆಂಕಟಕೃಷ್ಣಪ್ಪನವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ಓದುಗರ ಪತ್ರಗಳು

"ಮೂಗ ಚಂದ್ರಶೇಖರ್ ಸ್ಪರ್ಧಿಸಲಿ"

ಮಾನ್ಯರೆ,

ಶೃಂಗೇರಿ ವಿಧಾನಸಭಾ ಕ್ಷೇತ್ರದ ಶಾಸಕರಾಗಿ ಶ್ರೀ ಗೋವಿಂದ ಗೌಡರು ಕೇವಲ 2 ವರ್ಷಗಳಲ್ಲಿ ಬಹಳಷ್ಟು ಕೆಲಸ ಮಾಡಿದ್ದಾರೆ. ಅವರೇ ಪುನಃ ಈ ಕ್ಷೇತ್ರದಿಂದ ಸ್ಪರ್ಧಿಸುವ ಬಗ್ಗೆ ನಮ್ಮ ವಿರೋಧವಿಲ್ಲ.

ಆದರೆ ಕ್ಷೇತ್ರದ ಮತದಾರ ಜನತೆ ಹೊಸಬರನ್ನು, ಇನ್ನೂ ಹೊಸ ಹೊಸ ಹೆಜ್ಜೆಗಳನ್ನು ನಿರೀಕ್ಷಿಸುತ್ತಿದ್ದಾರೆಂಬ ವರದಿಗಳ ಹಿನ್ನೆಲೆಯಲ್ಲಿ ನ. ರಾ. ಪುರ ತಾಲ್ಲೂಕಿನ ಜನತೆಯ ಪರವಾಗಿ ಅವರ ಒಂದು ಅಭಿಪ್ರಾಯವನ್ನು ಮುಂದಿಡುತ್ತಿದ್ದೇನೆ.

ಜನತಾ ಪಕ್ಷದ ಆರಂಭದಲ್ಲಿ ಈ ಕ್ಷೇತ್ರದಲ್ಲಿ ಪಕ್ಷವನ್ನು ಕಟ್ಟಿ ಬೆಳೆಸಿದವರೂ, ಕ್ಷೇತ್ರ ಸಮಿತಿಯ ಅಧ್ಯಕ್ಷರಾಗಿ ಜನಪ್ರಿಯರಾಗಿರುವವರೂ ಆದ ಮೂಗ ಚಂದ್ರಶೇಖರ್ ಅವರು ಈ ಸಲ ಸ್ಪರ್ಧಿಸಲೆಂಬುದು ಇಲ್ಲಿನ ಜನರ ಆಶಯವಾಗಿದೆ.

ಉತ್ತಮ ವಿದ್ಯಾವಂತರೂ, ಖ್ಯಾತ ನ್ಯಾಯವಾದಿಯಾಗಿ ಜನಾನುರಾಗಿಗಳೂ, ಸಾರ್ವಜನಿಕ ರಂಗದಲ್ಲಿ ಹಲವು ವರ್ಷಗಳ ಸೇವೆಯ ಅನುಭವವುಳ್ಳವರೂ ಆದ ಅವರು ಸ್ಪರ್ಧಿಸಿದರೆ ಕ್ಷೇತ್ರ ಮಟ್ಟದಲ್ಲಿ ಪಕ್ಷ ಕೂಡ ಹೊಸ ಚೈತನ್ಯ ಪಡೆಯುವುದಲ್ಲದೆ ಚುನಾವಣೆಯಲ್ಲೂ ಪಕ್ಷ ಜಯ ಗಳಿಸುವಲ್ಲಿ ಯಾವ ಅನುಮಾನವೂ ಇಲ್ಲವೆಂಬುದು ಇಲ್ಲಿನ ಜನತೆಯ ಅಭಿಪ್ರಾಯವಾಗಿದೆ.

ತಾ|| ಜನತೆಯ ಪರವಾಗಿ,

ಹೆಚ್. ಜಿ. ಅಬ್ದುಲ್ ಮಾಜೀದ್,

ನ. ರಾ. ಪುರ.

"ಸಾರ್ಥಕ ಕೆಲಸಕ್ಕೆ ಗೃಹರಕ್ಷಕರು ಸಿದ್ಧ"

ಮಾನ್ಯರೆ,

ದಿನಾಂಕ 30.12.84 ಮತ್ತು 6.1.85 ರ 'ಮುಂಜಾವು' ಪತ್ರಿಕೆಯಲ್ಲಿ ಪ್ರಕಟವಾದಂತೆ ಕೊಪ್ಪದ ಹಿರೀಕೆರೆಯ ಹೂಳೆತ್ತುವ ಕೆಲಸ ನಡೆದಲ್ಲಿ ಇಂಥ ಸಾರ್ಥಕ ಕೆಲಸದ : ನಾವು ಗೃಹ ರಕ್ಷಕ ದಳದವರೂ ಸಂಪೂರ್ಣ ಭಾಗವಹಿಸುತ್ತೇವೆಂದು ತಿಳಿಸಲು ಹೆಮ್ಮೆ ಪಡುತ್ತೇವೆ.

—ಬಿ. ಎಸ್. ಕೃಷ್ಣಮೂರ್ತಿ,

ಶಾಖಾಧಿಕಾರಿ,

ಗೃಹರಕ್ಷಕ ದಳ ಕಚೇರಿ,

ಕೊಪ್ಪ.

ಸರ್ಕಾರಿ ಕಚೇರಿಗಳಲ್ಲಿ ಸ್ವಾಗತಾರ್ಹ ಬದಲಾವಣೆ

ಮಾನ್ಯರೆ,

ಕರ್ನಾಟಕದಲ್ಲಿ ಜನತಾ ಸರ್ಕಾರ ಅಧಿಕಾರಕ್ಕೆ ಬಂದಮೇಲೆ ಮಹಾರಾಷ್ಟ್ರದ ಅಹಮದ್ ನಗರದಲ್ಲಿ ಜಿಲ್ಲಾ ಕಛೇರಿಯ ಮಾದರಿಯಲ್ಲಿ ಪುನರ್ವ್ಯವಸ್ಥೆಗಾಗಿ ಆರಿಸಿಕೊಂಡ 2 ಜಿಲ್ಲಾ ಕಛೇರಿಗಳಲ್ಲಿ ಚಿಕ್ಕಮಗಳೂರು ಜಿಲ್ಲಾ ಕಛೇರಿ ಒಂದು. ಈ ಕಛೇರಿ ಈಗ ವಿದೇಶೀ ಕಛೇರಿಯೊಂದರಂತೆ ಹೊಸ ಸ್ವರೂಪ ಪಡೆದು ಜನಸಾಮಾನ್ಯರಿಗೆ ಅತಿ ಉಪಯುಕ್ತವಾಗುವಂತೆ ವ್ಯವಸ್ಥೆಗೊಂಡಿರುವ ವಿಷಯ ಡಿ. 5 ರ 'ಉದಯವಾಣಿ'ಯಲ್ಲಿ ಪ್ರಕಟವಾಗಿದೆ.

(4 ನೇ ಪುಟಕ್ಕೆ)

"ಮಲೆನಾಡಿನಲ್ಲಿ ಭತ್ತದ ಬೇಸಾಯ"

ಆಹಾರಧಾನ್ಯಗಳನ್ನು ಬೆಳೆಯುವುದು ಈ ದಿನಗಳಲ್ಲಿ ಬಹಳ ದುಬಾರಿಯಾಗಿದೆ. ಅದರಲ್ಲೂ, ಮೊದಲೇ ಇಳುವರಿ ತೀರಾ ಕಮ್ಮಿಯಿರುವ ಮಲೆನಾಡಿನಲ್ಲಂತೂ ಭತ್ತದ ಬೇಸಾಯ ಬಹಳ ಭಾರವಾಗಿ ಪರಿಣಮಿಸಿದೆ. ಆದರೆ ಅದನ್ನು ಬೆಳೆಯದೆ ಇರಲೂ ಸಾಧ್ಯವಿಲ್ಲ.

ಆದಕ್ಕಾಗಿ ನಮ್ಮ ರೈತರುಗಳು ಸ್ವಲ್ಪ ಬುದ್ಧಿ ಕೆರೆದು, ವ್ಯವಸಾಯದಲ್ಲಿ ಸ್ವಲ್ಪ ಕೌಶಲ್ಯ ಬಳಸಿ, ಕೆಲವಾದರೂ ಆಧುನಿಕ ಕ್ರಮಗಳನ್ನು ಅಳವಡಿಸಿಕೊಂಡರೆ ಹೆಚ್ಚು ಖರ್ಚಿಲ್ಲದೆ ಇಳುವರಿಯನ್ನು ಬಹಳಷ್ಟು ಸುಧಾರಿಸಬಹುದಲ್ಲದೆ ರೋಗ, ಜಿಟ್ಟು ಮುಂತಾದುವುಗಳಿಂದಾಗುವ ನಷ್ಟವನ್ನೂ ಬಹು ಮಟ್ಟಿಗೆ ಕಮ್ಮಿ ಮಾಡಬಹುದು.

ಈ ದೃಷ್ಟಿಯನ್ನಿಟ್ಟುಕೊಂಡು ಕೃಷಿ ಇಲಾಖೆಯ ಅನುಭವಿಯಾದ ಶ್ರೀ ಕ. ಸು. ರಾಮಚಂದ್ರ ಅವರು ಬರೆದ **"ಮಲೆನಾಡಿನಲ್ಲಿ ಭತ್ತದ ಬೇಸಾಯ"** ಎಂಬ 35 ಪುಟಗಳ ಕಿರು ಪುಸ್ತಕವೊಂದನ್ನು ನಮ್ಮ ಪತ್ರಿಕೆಯ 1984ರ ವಿಶೇಷ ಸಂಚಿಕೆಯಾಗಿ ಪ್ರಕಟಿಸಿದ್ದೇವೆ. ಮಲೆನಾಡಿನ ರೈತರ ಸಮಸ್ಯೆಗಳನ್ನೇ ದೃಷ್ಟಿಯಲ್ಲಿಟ್ಟುಕೊಂಡು ಬರೆದ ಈ ಪುಸ್ತಕದಲ್ಲಿ ಅತ್ಯಂತ ಅಗತ್ಯವಾದ ಕೆಲವು ಸುಧಾರಣಾ ಕ್ರಮಗಳನ್ನು ವಿವರಿಸಲಾಗಿದೆ. ಅಲ್ಲದೆ ಭೂಮಿಸಿದ್ಧತೆ, ಬೀಜೋಪಚಾರ, ಗೊಬ್ಬರಗಳು, ರೋಗಗಳು ಮತ್ತು ನಿವಾರಣೋಪಾಯಗಳು ಮುಂತಾದ ವಿಷಯಗಳನ್ನು ಬಹು ಸರಳವಾದ ಭಾಷೆಯಲ್ಲಿ ಚರ್ಚಿಸಲಾಗಿದೆ.

ಈ ಪುಸ್ತಕಕ್ಕೆ ಕೇವಲ 3 ರೂಪಾಯಿ ಬೆಲೆ ನಿಗದಿ ಮಾಡಿದ್ದೇವೆ. ಮಲೆನಾಡಿನ ಎಲ್ಲಾ ರೈತರೂ ಇದನ್ನು ಕೊಂಡು, ಓದಿ ಗ್ರಹಿಸಿ ಪ್ರಯೋಜನ ಪಡೆಯಬೇಕೆಂದು ಆಶಿಸುತ್ತೇವೆ.

ಹಳ್ಳಿಗಳಲ್ಲಿನ ಯುವಕ ರೈತ ಸಂಘಗಳು ಮತ್ತು ಯುವಕರ ಬಳಗಗಳು ಒಟ್ಟಿಗೆ ಹಲವು ಪ್ರತಿಗಳನ್ನು ತರಿಸಿ ಪುಸ್ತಕ ಸದುಪಯೋಗವಾಗುವಂತೆ ಹಂಚಬಹುದು. ಹಾಗೆ ಹತ್ತು ಅಥವಾ ಅದಕ್ಕಿಂತ ಹೆಚ್ಚು ಪ್ರತಿಗಳನ್ನು ಮುಂಗಡ ಹಣ ಕಳಿಸಿ ತರಿಸುವವರಿಗೆ ರೂ. 2-50 ಪೈಸೆಯಂತೆ ಪುಸ್ತಕ ಒದಗಿಸುವುದಲ್ಲದೆ ಅಂಚೆ ವೆಚ್ಚ ನಾವೇ ಭರಿಸುತ್ತೇವೆ.

ಕೇವಲ 1500 ಪ್ರತಿಗಳನ್ನು ಮಾತ್ರ ಅಚ್ಚುಹಾಕಿಸಿದ್ದೇವೆ. ಅಗತ್ಯವಿರುವವರು ತ್ವರೆ ಮಾಡಿ.

"ಭತ್ತ ಕೃಷಿ ಬಗ್ಗೆ ಉಪಯುಕ್ತ ಪುಸ್ತಕ"

ಮಾನ್ಯರೆ,

ಇಂದು ಬೆಳೆಗಾರನ ದೃಷ್ಟಿಯಿಂದ ಭತ್ತ ಬೆಳೆಯುವುದು ತುಂಬಾ ನಷ್ಟ (ದೇಶಕ್ಕೆ ಲಾಭವಾಗಬಹುದು) ಎಂಬಂತಾಗಿರುವಾಗ, "ಮಲೆನಾಡಿನಲ್ಲಿ ಭತ್ತದ ಬೇಸಾಯ" ಎಂಬ ಈ ಪುಸ್ತಕವನ್ನು ನಿಮ್ಮ ವಿಶೇಷ ಸಂಚಿಕೆಯಾಗಿ ಪ್ರಕಟಿಸಿರುವುದು ಸಮಯೋಚಿತವಾಗಿದೆ.

ಸುಧಾರಿತ ಬೇಸಾಯ, ಕಡಿಮೆ ವೆಚ್ಚ ಹಾಗೂ ಫಸಲಿನ ಹೆಚ್ಚಳದಿಂದಲಾದರೂ ರೈತರು ಸ್ವಲ್ಪ ಸುಧಾರಿಸಿಕೊಳ್ಳುವಂತೆ ಉತ್ತಮವಾದ ವೈಜ್ಞಾನಿಕ ಸಲಹೆಗಳನ್ನು ಮತ್ತು ಅನುಭವಗಳನ್ನು ಲೇಖಕರು (ಶ್ರೀ ಕ. ಸು. ರಾಮಚಂದ್ರ) ನೀಡಿದ್ದಾರೆ.

ನಮ್ಮಲ್ಲಿ ಕೃಷಿ ಜಮೀನು ಒಂದು 'ಆಸ್ತಿ'ಯಾಗಿಯೇ ಇನ್ನೂ ಉಳಿದಿದೆ. ಇದನ್ನೊಂದು ಉತ್ಪಾದನಾ ಮಾಧ್ಯಮವಾಗಿ ಬಳಸಲು ಪ್ರತಿಯೊಂದು ಬೆಳೆಯ ವಿಷಯದಲ್ಲೂ ಇಂತಹ ಪ್ರಾದೇಶಿಕವಾದ ಅನುಭವದ ಸಾಹಿತ್ಯ ಈಗ ಅಗತ್ಯವಾಗಿದೆ.

ಇದೇ ಪುಸ್ತಕದಲ್ಲಿ ಅಳವಡಿಸಿರುವ "ಕಾಮಧೇನು ಸಗಣಿ ಅನಿಲ ಘಟಕ"ದ ಚಿತ್ರಸಹಿತ ಲೇಖನವೂ ಬಹಳ ಉಪಯುಕ್ತವಾದುದೇ. ಇದನ್ನು ವ್ಯಾಪಕವಾಗಿ ಪ್ರಚಾರಗೊಳಿಸುವುದಲ್ಲದೆ ಅದನ್ನು ವಿನ್ಯಾಸಗೊಳಿಸಿದ ಸಾಗರದ ಶ್ರೀ ಮಹಸೂರು ರಾಮಚಂದ್ರ ಅವರನ್ನು ಸೂಕ್ತ ರಾಜ್ಯ ಪ್ರಶಸ್ತಿ ನೀಡಿ ಸನ್ಮಾನಿಸಲೆಂದು ಹಾರೈಸುತ್ತೇನೆ. ಹಾಗೂ ಈ ಘಟಕವನ್ನು ಸಂಬಂಧಪಟ್ಟ ಇಲಾಖೆ ಮಾನ್ಯ ಮಾಡಿ, ಅದನ್ನು ಕಟ್ಟಿಸಿಕೊಳ್ಳುವವರಿಗೆ ಸಾಲ ಮತ್ತು ಸಬ್ಸಿಡಿ ಕೊಡುವ ಮೂಲಕ ಪ್ರೋತ್ಸಾಹಿಸುವುದು ಅಗತ್ಯ. ಹಾಗೆ ಅನುಕೂಲಗಳನ್ನು ಕೊಟ್ಟಾಗ ಮಾತ್ರ ಹೆಚ್ಚಿನ ಸಂಖ್ಯೆಯಲ್ಲಿ ಜನರು ಈ ಯೋಜನೆಯನ್ನು ಬೆಂಬಲಿಸುತ್ತಾರೆ.

ಈ ಎರಡೂ ಲೇಖನಗಳನ್ನು ಬರೆದ ಶ್ರೀ ಕ.ಸು. ರಾಮಚಂದ್ರ ಅವರು ರೈತರ ಅಭಿನಂದನೆಗೆ ಪಾತ್ರರು. ಹಾಗೆಯೇ, ಕೆಲವೇ ತಾಲ್ಲೂಕುಗಳ ವ್ಯಾಪ್ತಿಯ 'ಮುಂಜಾವು'ನಂಥ ಒಂದು ಸಣ್ಣ ಪತ್ರಿಕೆ ಈ ಸಾಧನೆಗೈದಿರುವುದು ತುಂಬಾ ಮೆಚ್ಚುವಂಥದ್ದು. ಇದು ಇನ್ನೂ ಅನೇಕ ಪತ್ರಿಕೆಗಳಿಗೆ ಮಾರ್ಗದರ್ಶಿಯಾಗಲೆಂದು ಹಾರೈಸುತ್ತೇನೆ.

—ಹೆಗ್ಗಾರು ಜಯಂತ್,

ನಿಲುವಾಗಿಲು ಅಂಚೆ, ಕೊಪ್ಪ ತಾ||

ಭಾರತದಲ್ಲಿ 'ಗಣರಾಜ್ಯ' ವ್ಯವಸ್ಥೆ — ಒಂದು ಚಿಂತನೆ

(2 ನೇ ಪುಟದಿಂದ)

ಯಿತಿಗಳಲ್ಲಿ ಗ್ರಾಮಕ್ಕೆ ಸಂಬಂಧಪಟ್ಟ ಯಾವ ಪ್ರಮುಖ ಅಧಿಕಾರವೂ ಇಲ್ಲ. ಎಷ್ಟೆಂದರೆ, ಆ ಗ್ರಾಮದೊಳಗೆ ವಿವಿಧ ಇಲಾಖೆಗಳು ನಡೆಸುವ ಕಾಮಗಾರಿ-ಅಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಆ ಪಂಚಾಯ್ತಿಗೆ ತಿಳಿಸಬೇಕೆಂಬ ಅಗತ್ಯ ಕೂಡ ಇಲ್ಲ!

ಇನ್ನೂ ಮೇಲ್ಮಟ್ಟದ ಸಂಸ್ಥೆಗಳ ಮೂಲಕ ಮೇಲೆ ಹೋದಂತೆ ಅಧಿಕಾರ ಇನ್ನೂ ಮೇಲೆ ಹೋಗಿ ಕಡೆಗೆ ಕೇಂದ್ರ ಸರ್ಕಾರದಲ್ಲ ಐಕ್ಯವಾಗುತ್ತದೆ. ಆಗ ಕೂಡ ಅಲ್ಲಿ ಆಡಳಿತ ನಡೆಸುವ ಪಕ್ಷದ ಸ್ಥಳೀಯ ಅಥವಾ ಪ್ರಾಂತೀಯ ಮುಖಂಡರ್ಯಾರದೊ ಮೂಲಕ, ಏನಾದರೂ ಪ್ರಮುಖ ನೀತಿ-ತೀರ್ಮಾನಗಳ ಬಗ್ಗೆ ಅಭಿಪ್ರಾಯ ತಿಳಿಸಬಹುದೋ ಎಂದರೆ ಸಾಧ್ಯವಿಲ್ಲ. ಕೇಂದ್ರದಲ್ಲೂ ಅಧಿಕಾರ ಒಬ್ಬ ವ್ಯಕ್ತಿ ಅಥವಾ ಇಬ್ಬರು ವ್ಯಕ್ತಿಗಳ ಕೈಯಲ್ಲಿ ಕೇಂದ್ರೀಕೃತ.

ದೇಶದ ಆಗು ಹೋಗುಗಳ ತೀರ್ಮಾನಗಳೆಲ್ಲ ಇಲ್ಲಿನ ಆರ್ಥಿಕವಾಗಿ ಪ್ರಬಲವಾದ ಗುಂಪುಗಳ ಹಿತಾಸಕ್ತಿಗನುಗುಣವಾಗಿಯೇ ಆಗುವುದು. ಈ ಪ್ರಬಲರು ದೇಶದಲ್ಲಿ ಎಲ್ಲಿ ಬೇಕೆಂದರಲ್ಲಿ ಯಾವ ಸಂಪನ್ಮೂಲವನ್ನಾದರೂ 'ಗುತ್ತಿಗೆ' ಹಿಡಿದು ಲೂಟಿ ಮಾಡಬಹುದು, ಯಾವ ಜಮೀನು-ಅರಣ್ಯಗಳನ್ನಾದರೂ ನಾಶಮಾಡಿ ನೀಲಗಿರಿ ನೆಡಿಸಿ, ಸಂಪತ್ತು 'ಬೆಳೆ'ಯಬಹುದು; ಅಸ್ಸಾಂನಿಂದ ಪೆಟ್ರೋಲಿಯಂ, ಚಹಾವನ್ನೂ, ಪಂಜಾಬಿನಿಂದ ಗೋಧಿಯನ್ನೂ, ಕರ್ನಾಟಕದಿಂದ ಚಿನ್ನ, ಗಂಧವನ್ನೂ—ಹೀಗೆ ಆಯಾ ಪ್ರದೇಶದ ಅಭಿವೃದ್ಧಿಗಾಗಿ ಯಾವ ಪ್ರತಿಫಲವನ್ನೂ ನೀಡದೆ ಕೊಂಡುಹೋಗಿ (ಸರಕಾರಿ ಯಂತ್ರದ ಮೂಲಕವಾದರೂ ಸರಿ) ತಮ್ಮ ಬಂಡವಾಳಕ್ಕೆ ಶಾಶ್ವತ ಇಡುಗಂಟನ್ನಾಗಿ ಮಾಡಿಕೊಳ್ಳಬಹುದು; ದಕ್ಷಿಣದಲ್ಲಿ ತಮಿಳು ನಾಡಿನ, ಮುಖ್ಯವಾಗಿ ಮದ್ರಾಸಿನವರು, ಪೂರ್ವ ಮತ್ತು ಈಶಾನ್ಯ ಭಾರತದಲ್ಲಿ ಬಂಗಾಲಿಗಳು. ಪಶ್ಚಿಮದಲ್ಲಿ ಸಿಂಧಿಗಳು, ಬನಿಯಾಗಳು ಎಲ್ಲಾ ರಂಗಗಳನ್ನೂ ವ್ಯಾಪಿಸಿ, ಸ್ಥಳೀಯರನ್ನು ಜೀತಕ್ಕಿಟ್ಟುಕೊಳ್ಳಬಹುದು, ಅದಕ್ಕಾಗಿ ಅವರದೇ ಭಾಷೆಯನ್ನು ಹೇರಿ, ಪ್ರಾದೇಶಿಕ ಭಾಷೆಯನ್ನು ಹತ್ತಿಕ್ಕಬಹುದು, ಇಡೀ ರಾಷ್ಟ್ರಕ್ಕೆಲ್ಲ ಒಂದೇ ವ್ಯವಹಾರ ಭಾಷೆ ಎಂದು ತಮಗನುಕೂಲವಾದ ಭಾಷೆಯನ್ನು ಹೇರಬಹುದು.....

ಇಂಥ ಸರ್ವಾಧಿಕಾರ, ಅಧಿಪತ್ಯ, ಸುಲಿಗೆಗಳ ವಿರುದ್ಧ ಪ್ರಾದೇಶಿಕ ಆಶೋತ್ತರಗಳು ಹೊರ ಹೊಮ್ಮಿದರೆ, ಸಿಡಿದೆದ್ದರೆ ಅದಕ್ಕೆ 'ಸಂಕುಚಿತ ಪ್ರಾದೇಶಿಕತೆ', 'ಪ್ರತ್ಯೇಕತಾವಾದ', 'ದೇಶದ ಸಮಗ್ರತೆ ಮತ್ತು ಏಕತೆಗೆ ದ್ರೋಹ' ಮುಂತಾಗಿ ಹೆಸರಿಟ್ಟು ಈ ಆಶೋತ್ತರಗಳ, ಬೇಡಿಕೆಗಳ ದಮನ, ಸಾಮೂಹಿಕ ಹತ್ಯೆ-ಅದೂ ಗಡಿಗಳನ್ನು ಕಾಯಬೇಕಾದ ಸೈನಿಕರನ್ನು ಸಹ ಬಳಸಿ.

ಗಣರಾಜ್ಯದ ಘಟಕಗಳು ಹೀಗೆ ಕೇಂದ್ರೀಕೃತ ತೂಕದಡಿ ನಲುಗಿ ಹೋಗುತ್ತಿದ್ದರೂ ಸಹ ನಮ್ಮದು ಸ್ವತಂತ್ರ, ಸಾರ್ವಭೌಮ, ಪ್ರಜಾಸತ್ತಾತ್ಮಕ **'ಗಣರಾಜ್ಯ'!**

—ಸಿರಿಮನೆ ನಾಗರಾಜ್.

ಗಮಕ ಸ್ಪರ್ಧೆ ವಿಜೇತರಿಗೆ ಪ್ರಶಂಸಾ ಪತ್ರ ವಿತರಣೆ

ಕೊಪ್ಪ: ಇಲ್ಲಿನ ಮಹಿಳಾ ಸಮಾಜದ ಆಶ್ರಯದಲ್ಲಿ ಡಿಸೆಂಬರ್ 16 ರಂದು ನಡೆದ ಗಮಕ ಕಲಾ ಪರಿಷತ್ತಿನ ಗಮಕ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಪ್ರಶಂಸಾ ಪತ್ರ ಮತ್ತು ಬಹುಮಾನಗಳನ್ನು ಜ. 22 ರಂದು ಶ್ರೀಮತಿ ಶೀಲಾ ಗುರ್ಜರ್ ವಿತರಣೆ ಮಾಡಿದರು. ಶ್ರೀಮತಿ ರಜನಿ ಡಿ. ನಾಯಕ್ ಅಧ್ಯಕ್ಷತೆ ವಹಿಸಿದ್ದರು.

ಶ್ರೀಮತಿ ತಾರಾ ಪ್ರಸಾದ್ ಸ್ವಾಗತಿಸಿ ಗಮಕ ಕಲೆಯ ಕಿರು ಪರಿಚಯ ಮಾಡಿ ಕೊಟ್ಟರು. ಸ್ಪರ್ಧೆಯ ವಿಜೇತರು ಸಭೆಯಲ್ಲಿ ತಮ್ಮ ಪ್ರತಿಭೆ ಪ್ರದರ್ಶಿಸಿದರು. ಸಂಗೀತ ವಿದುಷಿ ಮತ್ತು ಗಮಕ ತರಗತಿಯ ಉಪಾಧ್ಯಾಯಿನಿ ಶ್ರೀಮತಿ ಶಾರದಮ್ಮನವರು ತಮ್ಮ ಶಿಷ್ಯರೊಂದಿಗೆ ತ್ಯಾಗರಾಜರ ಕೀರ್ತನೆ ಹಾಡಿದರು.

ಇದೇ ಸಮಾಜದ ಆಶ್ರಯದಲ್ಲಿ ನಡೆದ, ಪರಿಷತ್ತಿನ ಗಮಕ ಪ್ರಥಮ ಪರೀಕ್ಷೆಗೆ 24 ಜನ ಭಾಗವಹಿಸಿದ್ದು 22 ಜನ ತೇರ್ಗಡೆಯಾಗಿದ್ದಾರೆ.

ತನೂಡಿ ಶಾಲೆ ವಾರ್ಷಿಕೋತ್ಸವ

ಕೊಪ್ಪ: ಇಲ್ಲಿಗೆ ಸಮೀಪದ ತನೂಡಿ ಕಿರಿಯ ಪ್ರಾಥಮಿಕ ಶಾಲೆಯ ವಾರ್ಷಿಕೋತ್ಸವ ಜ. 22 ರಂದು ಹೆಚ್.ಜಿ. ಗೋವಿಂದ ಗೌಡರ ಅಧ್ಯಕ್ಷತೆಯಲ್ಲಿ ನಡೆಯಿತು. ಇದಕ್ಕೆ ಮೊದಲು ಅವರು ಶಾಲೆಯ ನೂತನ ಕೊಠಡಿಯನ್ನು ಉದ್ಘಾಟಿಸಿದರು.

ಶಿವಮನೆ ನಾಗರಾಜ್ ಶಾಲಾ ಮಕ್ಕಳಿಗೆ ಬಹುಮಾನ ವಿತರಿಸಿ, ವಾರ್ಷಿಕೋತ್ಸವದ ಸಮಾರೋಪ ಭಾಷಣ ಮಾಡಿದರು. ತಾ|| ಶಿಕ್ಷಣಾಧಿಕಾರಿ ಡಿ.ವಿ. ಶಿವಮೂರ್ತಿ ಹಾಗೂ ಮಾಜಿ ಪಟೇಲ್ ಹಾಗೂ ಗ್ರಾಮದ ಹಿರಿಯರಾದ ತಮ್ಮೇಗೌಡರು ಮುಖ್ಯ ಅತಿಥಿಗಳಾಗಿದ್ದರು.

ಟಿ.ವಿ. ರಾಮಪ್ಪ ಸ್ವಾಗತಿಸಿದರು. ಟಿ. ಕೇಶವ ಶಾಲಾ ವರದಿ ಮತ್ತು ಮನವಿ ಪತ್ರ ಸಲ್ಲಿಸಿದರು. ಶಾಲಾ ಉಪಾಧ್ಯಾಯರಾದ ವಿ. ರಾಮಕೃಷ್ಣ ವಂದಿಸಿದರು.

1982 ರಲ್ಲಿ ಕೇವಲ 12 ಮಕ್ಕಳಿದ್ದ ಈ ಶಾಲೆಯಲ್ಲಿ ಈಗ 59 ಮಕ್ಕಳು ಕಲಿಯುತ್ತಿದ್ದು, ಇದಕ್ಕಾಗಿ ಶ್ರಮಿಸಿದ ಶಾಲಾ ಉಪಾಧ್ಯಾಯರ ಶ್ರದ್ಧೆಯನ್ನು ಗೋವಿಂದ ಗೌಡರು ಶ್ಲಾಘಿಸಿದರು.

ಕವಿಗಳೆ ಗಮನಿಸಿ

ಚಿಕ್ಕಮಗಳೂರು ಜಿಲ್ಲಾ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿ ವಾಚಿಸಿದ ಎಲ್ಲಾ ಕವನಗಳನ್ನು ಸೇರಿಸಿ ಪುಸ್ತಕ ರೂಪದಲ್ಲಿ ಪ್ರಕಟಿಸಬೇಕೆಂದಿದ್ದೇನೆ. ಆದ್ದರಿಂದ ಕವಿಗೋಷ್ಠಿಯಲ್ಲಿ ವಾಚಿಸಿದ ಕವನಗಳನ್ನೆಲ್ಲ ಕವಿಗಳು ಈ ಕೆಳಕಂಡ ವಿಳಾಸಕ್ಕೆ ಕಳಿಸಬೇಕಾಗಿ ವಿನಂತಿ.

ಎಂ.ವಿ. ಗಂಗಾಧರ್, ಪ್ರಕಾಶಕರು,
ಶ್ರೀ ವಿನಾಯಕ ಪ್ರಕಾಶನ,
ಗುಡ್ಡೆ ಕೋಟೆ, ಕೊಪ್ಪ ತಾ||

ಕಚೇರಿಗಳಲ್ಲಿ ಸ್ವಾಗತಾರ್ಹ ಬದಲಾವಣೆ

(3 ನೇ ಪುಟದಿಂದ)

ಈಗ್ಗೆ 4-5 ವರ್ಷಕ್ಕಿಂತ ಹಿಂದಿನ 30 ವರ್ಷಗಳಲ್ಲಿ ವರ್ಷಕ್ಕೆ ಹತ್ತಾರು ಸಲ ಈ ಜಿಲ್ಲಾ ಕಛೇರಿಗೆ ಕಾರ್ಯಾರ್ಥವಾಗಿ ಹೋಗಿ ಬರುತ್ತಿದ್ದ ಅನುಭವದಿಂದ ನಾನು ತಳೆದಿದ್ದ ಕೆಟ್ಟ ಅಭಿಪ್ರಾಯವನ್ನು ಈಗ ಕೇವಲ ಕುತೂಹಲಕ್ಕಾಗಿ ಅಲ್ಲಿಗೆ ಹೋಗಿ ನೋಡಿದ ಮೇಲೆ ಬದಲಾಯಿಸಿಕೊಳ್ಳಬೇಕಾಯಿತು. ಕನ್ನಡತನ ನೆಲೆಗೊಳಿಸಿ, ಭ್ರಷ್ಟಾಚಾರ ಕಡಿಮೆ ಮಾಡಿ, ಶ್ರೀ ಸಾಮಾನ್ಯನಿಗೆ ಕಛೇರಿಯೆಂದರೆ ಭೀತಿ-ಜಿಗುಪ್ಸೆಗಳ ಬದಲು ಆತ್ಮೀಯ ಅಭಿಮಾನ ಹುಟ್ಟಿಸುವ ಪ್ರಾಮಾಣಿಕ ಯತ್ನವೊಂದು ಇಲ್ಲಿ ನಡೆದಿದೆ. ಪ್ರಜಾ ಪ್ರಭುತ್ವವನ್ನು ನಿಜವಾದ ಅರ್ಥದಲ್ಲಿ ನೆಲೆಗೊಳಿಸುವ ಜನತಾ ಸರ್ಕಾರದ ಈ ಪ್ರಯತ್ನ ಮತ್ತು ಜಿಲ್ಲಾಧಿಕಾರಿಗಳ ಹಾರ್ದಿಕ ಆಸಕ್ತಿ ನಿಜಕ್ಕೂ ಅಭಿನಂದನೀಯ. ಇದು ಎಲ್ಲ ಮಟ್ಟದಲ್ಲೂ ಕಾರ್ಯಗತವಾಗಬೇಕು.

ಇದೀಗ ಪ್ರಧಾನಿ ರಾಜೀವ್ ಗಾಂಧಿಯೇ ರಾಷ್ಟ್ರ ಮಟ್ಟದಲ್ಲಿ ಹೊಸತನ, ಚುರುಕುತನಗಳ ಅಗತ್ಯವನ್ನು ಮನಗಂಡಿರುವುದರಿಂದ ಎಲ್ಲಾ ರಂಗಗಳಲ್ಲೂ, ಎಲ್ಲಾ ಇಲಾಖೆ ಕಚೇರಿಗಳಲ್ಲೂ ಇಂಥ ಸುಂದರ ಬದಲಾವಣೆ ಮೂಡಲೆಂದು ಈ ಕಚೇರಿಯನ್ನು ನೋಡಿದ ನಂತರ ಹಾರೈಸುವಂತಾಗುತ್ತದೆ.

—ಹರಿಹರಪುರ ಬಿ ಸುಬ್ರಮಣ್ಯಂ,
ಬೆಂಗಳೂರು.

'ಮುಂಜಾವು' ವಾರ್ಷಿಕ ಚಂದಾ 20ರೂ.

ಕ ರ್ನಾ ಟ ಕ ಸ ರ್ಕಾ ರ

ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿ, ಕೊಪ್ಪ ವಿಭಾಗ, ಕೊಪ್ಪ.

ಪ್ರ ಕ ಟ ಣೆ

ರೈತರು ಸಸಿಗಳನ್ನು ಬೆಳೆಯಿಸಿ ಅರಣ್ಯ ಇಲಾಖೆಗೆ ನೀಡುವುದು

ಈ ಮೂಲಕ ರೈತರಿಗೆ, ಶಾಲಾ ಕಾಲೇಜುಗಳು, ಇತರ ಸಂಘ ಸಂಸ್ಥೆಗಳಿಗೆ ತಿಳಿಯಪಡಿಸುವುದೇನೆಂದರೆ, ಅರಣ್ಯ ಇಲಾಖೆಯು ರೈತರಿಂದ ಮತ್ತು ಸಂಘ ಸಂಸ್ಥೆಗಳಿಂದ ಸಸಿಗಳನ್ನು ಬೆಳೆಯಿಸಿ, ಅವರಿಂದ ಕೊಳ್ಳುವ ಹೊಸ ಯೋಜನೆಯೊಂದನ್ನು **"ಸಾಮಾಜಿಕ ಅರಣ್ಯ ಯೋಜನೆ"**ಯಲ್ಲಿ ಹಮ್ಮಿಕೊಂಡಿದೆ. ಈ ಸದಾವಕಾಶವನ್ನು ಬಳಸಿಕೊಂಡು ಅವಕಾಶವಿರುವ, ಇಚ್ಛೆಯುಳ್ಳ ರೈತರು, ಸಂಸ್ಥೆಗಳು ಸಸಿಗಳನ್ನು ಪ್ಲಾಸ್ಟಿಕ್ ಚೀಲಗಳಲ್ಲಿ ತಮ್ಮ ಸ್ವಂತ ಜಮೀನಿನಲ್ಲಿ ಬೆಳೆಯಿಸಿ, ನೆಡಲು ಯೋಗ್ಯವಾದಾಗ ಅರಣ್ಯ ಇಲಾಖೆಗೆ ನಿಗದಿತ ದರದಲ್ಲಿ ಮಾರಾಟ ಮಾಡಬಹುದಾಗಿದೆ. ಈ ಬಗ್ಗೆ ವಿವರಗಳು ಈ ಕೆಳಗಿನಂತಿವೆ:

1) ಇಚ್ಛೆಯುಳ್ಳ ರೈತರು ಉಪ ಅರಣ್ಯ ಸಂರಕ್ಷಣಾಧಿಕಾರಿಯವರ ಕಛೇರಿಯಲ್ಲಿ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬೇಕು.

2) 25,000 ಕ್ಕೂ ಹೆಚ್ಚು ಸಸಿಗಳನ್ನು (ಇಲಾಖೆಗೂ ಮತ್ತು ಸಾರ್ವಜನಿಕರಿಗೂ ಬೇಕಾಗುವ ಸಸಿಗಳು) ಬೆಳೆಯಿಸಲು ಅನುಕೂಲ ಮತ್ತು ಸಾಮರ್ಥ್ಯವುಳ್ಳವರಾಗಿರಬೇಕು.

3) ಬೆಳೆಯಿಸುವ ಸಸಿಗಳಿಗೆ ಪೂರ್ಣ ರಕ್ಷಣೆ ಒದಗಿಸುವ ಮತ್ತು ಸದಾ ನೀರು ಹಾಕುವ ಅವಕಾಶವಿರಬೇಕು.

4) ಸ್ವಲ್ಪ ಪ್ರಮಾಣದಲ್ಲ ಜಾಮೀನು ಠೇವಣಿಯನ್ನು ಒದಗಿಸಬೇಕು-

5) ಸಸಿ ಬೆಳೆಯಿಸಲು ಬೇಕಾಗುವ ಬೀಜ ಮತ್ತು ಪ್ಲಾಸ್ಟಿಕ್ ಚೀಲಗಳನ್ನು ಇಲಾಖೆಯಿಂದ ಒದಗಿಸುವುದು. ಬೇಕಾಗುವ ಗೊಬ್ಬರ, ಕಾಂಪೋಸ್ಟ್ ಮಣ್ಣು ಮತ್ತು ಮರಳನ್ನು ರೈತರೇ ಸಂಗ್ರಹಿಸಿಕೊಳ್ಳಬೇಕು. ಹಾಗೂ ಬೆಳೆಯಿಸುವ ವಿಧಾನದ ಬಗ್ಗೆ ಇಲಾಖೆಯ ಸಿಬ್ಬಂದಿಗಳು ಪೂರ್ಣ ಮಾಹಿತಿ ಒದಗಿಸುತ್ತಾರೆ. ಹಾಗೂ ಮೇಲ್ವಿಚಾರಣೆ ನೋಡಿಕೊಳ್ಳುತ್ತಾರೆ.

6) ಸಸಿಗಳು ಬೆಳೆದು ನೆಡಲು ಯೋಗ್ಯವಾದಾಗ ಯೋಗ್ಯವಾದ ಸಸಿಗಳನ್ನು ಇಲಾಖೆಯು ನಿಗದಿತವಾದ ಈ ಕೆಳಕಂಡ ದರದಲ್ಲಿ ಖರೀದಿಸುವುದು.

(1) 4"X6" ಅಳತೆಯ ಪ್ಲಾಸ್ಟಿಕ್ ಚೀಲದಲ್ಲಿರುವ ಪ್ರತಿ ಸಸಿಗೆ 0-10 ಪೈಸೆ.
(2) 5"X8" " " 0-15 ಪೈಸೆ.

ಹೆಚ್ಚಿನ ಮಾಹಿತಿಗಳನ್ನು ಈ ಕಛೇರಿಯಿಂದ ಕೆಲಸದ ವೇಳೆಯಲ್ಲಿ ಪಡೆದುಕೊಳ್ಳಬಹುದು.

ತಾರೀಖು: 16-1-85.

(ಸಹಿ) ವಿನಯ್ ಲೂಥ್ರ,
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಕೊಪ್ಪ ವಿಭಾಗ, ಕೊಪ್ಪ.

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಶಿವಮನೆ ನಾಗರಾಜ್; ಅಚ್ಚು: ದೀಪಿಕೆ ಅಚ್ಚುಕೂಟ, ಕೊಪ್ಪ.